## ಶ್ರೀ ಗೋವಿಂದರಾಜು, ಮಾನ್ಯ ವಿಧಾನ ಪರಿಷತ್ ಸದಸ್ಯರು, ಇವರು ಮಂಡಿಸಿರುವ ಶೂನ್ಯ ವೇಳೆ ಸೂಚನೆಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಉತ್ತರ

ವಿಷಯ: ಮಾಸ್ತಿ ಪೆರಿಯಾತ್ ಗ್ರಂಥಾಲಯ ಹಾಗೂ ಸ್ಮಾರಕ ಭವನಕ್ಕೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವ ಕುರಿತು.

*****

**ಪ್ರಶ್ನೆ:** ಕನ್ನಡದ ಆಸ್ತಿ ಎಂದಾಕ್ಷಣ ನೆನಪಾಗುವುದು ಕನ್ನಡಕ್ಕೆ 4ನೇ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ "ಮಾಸ್ತಿ ವೆಂಕಟೇಶ ಅಯ್ಯಂಗಾರ್" ಅವರ ಸಾಹಿತ್ಯ ಕೃಷಿಯನ್ನು ನಾಡಿನಾದ್ಯಂತ ಪಸರಿಸುವ ಉದ್ದೇಶದಿಂದ ಸರ್ಕಾರವು ಮಾಸ್ತಿ ಅವರು ಹುಟ್ಟಿ ಬೆಳೆದಿದ್ದ ಮನೆಯನ್ನು ಮಾಸ್ತಿ ಪೆರಿಯಾತ್ ಗ್ರಂಥಾಲಯ ಹಾಗೂ ಸ್ಮಾರಕ ಭವನವನ್ನಾಗಿ ಪರಿವರ್ತಿಸಿದೆ. ಆದರೆ, ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿರುವುದು ಸಾಹಿತ್ಯಸಕ್ತರಲ್ಲಿ ಬೇಸರ ಮೂಡಿಸಿದೆ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ರವರ ಮನೆಯನ್ನು 2019ರಲ್ಲಿ ಸ್ಮಾರಕ ಭವನ ಹಾಗೂ ಪೆರಿಯಾತ್ ಗ್ರಂಥಾಲಯವಾಗಿ ಪರಿವರ್ತಿಸಲಾಯಿತು. ಈ ಭವನದ ನಿರ್ವಹಣೆಗೆ ಮತ್ತು ಮಾಸ್ತಿ ಅವರ ಸಾಹಿತ್ಯ ಕೃಷಿ ಮುಂದುವರಿಸುವ ಉದ್ದೇಶದಿಂದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್ ಕೂಡ ಸ್ಥಾಪಿಸಲಾಯಿತು. ಆದರೆ ಅಧಿಕಾರಿಗಳು ಟ್ರಸ್ಟ್ ಪದಾಧಿಕಾರಿಗಳು ಮಾಸ್ತಿಯವರ ಜನ್ಮ ದಿನದಂದು ಬಂದು ಹೋಗುತ್ತಾರೆಯೇ ವಿನ: ಮತ್ತೆ ಸ್ಮಾರಕ ಭವನದತ್ತ ತಿರುಗಿಯೂ ನೋಡುವುದಿಲ್ಲ ಎನ್ನುವುದು ವಾಸ್ತವದ ಸಂಗತಿ. ಇದರೊಂದಿಗೆ ಭವನ ನಿರ್ವಹಣೆ ಇಲ್ಲದೆ ಗ್ರಂಥಾಲಯದ ಹೆಂಚುಗಳು ಸಡಿಲುಗೊಂಡಿದ್ದು, ಮಳೆಯಾದಾಗ ಸೋರುತ್ತದೆ ತಾರಸಿಯ ಮರ ಮುಟ್ಟು ಮುರಿದಿದ್ದು ಹೆಂಚುಗಳು ನೆಲಕ್ಕೆ ಬೀಳುತ್ತಿದೆ. ಇದರೊಂದಿಗೆ ಶೌಚಾಗೃಹ ನಿರ್ವಹಣೆ ಇಲ್ಲದಿರುವುದರಿಂದ ಕೆಟ್ಟ ವಾಸನೆಯಿಂದ ನಾರುತ್ತಿದೆ ಈ ಹಿಂದೆ ಇದ್ದಂತ ಅಧ್ಯಕ್ಷರು ರಾಜೀನಾಮೆ ನೀಡಿ ಸುಮಾರು 8 ತಿಂಗಳು ಕಳೆದರು ಇದುವರೆಗೂ ಸರ್ಕಾರ ಯಾರನ್ನು ನೇಮಕ ಮಾಡಿರುವುದಿಲ್ಲ. ಒಟ್ಟಾರೆಯಾಗಿ ಸರ್ಕಾರ ಈ ಕೂಡಲೇ ಗಮನಹರಿಸಿ, ಈ ಎಲ್ಲಾ ಸಮಸ್ಯೆಗಳನ್ನು ಸರಿಪಡಿಸಿ ಸಾಹಿತ್ಯಾಸಕ್ತರಿಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನಕ್ಕೆ ತರಲು ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರುತ್ತೇನೆ.

******

**ಉತ್ತರ:**"ಮಾಸ್ತಿ ಕನ್ನಡದ ಆಸ್ತಿ" ಎಂದೇ ಪ್ರಸಿದ್ಧರಾಗಿದ್ದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ದಿ|| ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ರವರು ಕನ್ನಡದ ಸಾರಸ್ವತ ಲೋಕದ ದಿಗ್ಗಜರಲ್ಲಿ ಒಬ್ಬರು. ಮಾಸ್ತಿ ವೆಂಕಟೇಶ ಅಯ್ಯಂಗಾರ್ ರವರ ಸಾಹಿತ್ಯವನ್ನು ಸಂರಕ್ಷಣೆ ಮತ್ತು ಸಂಶೋಧನೆ ಮಾಡಲು ಇವರ ಹೆಸರಿನಲ್ಲಿ ಕೋಲಾರ ಜಿಲ್ಲೆಯ ಮಾಲೂರಿನ ಮಾಸ್ತಿಯಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ರವರ ಹೆಸರಿನಲ್ಲಿ 1997ರಲ್ಲಿ ಟ್ರಸ್ಟನ್ನು ಸ್ಥಾಪಿಸಲಾಗಿದೆ. ಮಾಸ್ತಿ ಯವರು ಹುಟ್ಟಿ ಬೆಳೆದ ಮನೆಯನ್ನು ಮಾಸ್ತಿ ಪೆರಿಯಾತ್ ಗ್ರಂಥಾಲಯ ಹಾಗೂ ಸ್ಮಾರಕ ಭವನವನ್ನಾಗಿ ಪರಿವರ್ತಿಸಲಾಗಿದೆ. ಸದರಿ ಸ್ಮಾರಕ ಭವನದಲ್ಲಿ ಕೆಲವೊಂದು ಸಣ್ಣ ಪುಟ್ಟ ದುರಸ್ತಿಗಳಿದ್ದು, ಸದರಿ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳುವ

..2...

ಸಂದರ್ಭದಲ್ಲಿಯೇ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಮಾವಿನಕೆರೆ ರಂಗನಾಥ್ ರವರು ರಾಜೀನಾಮೆ ನೀಡಿದ್ದರಿಂದ ದುರಸ್ತಿ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.

ಪ್ರಸ್ತುತ ಹೊಸ ಅಧ್ಯಕ್ಷರ ನೇಮಕಾತಿ ಆಗುವವರೆಗೆ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ ಇವರನ್ನು ಟ್ರಸ್ಟಿನ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಮಾಸ್ತಿ ಪೆರಿಯಾತ್ ಗ್ರಂಥಾಲಯ ಹಾಗೂ ಸ್ಮಾರಕ ಭವನದಲ್ಲಿ ಕೈಗೊಳ್ಳಬೇಕಾದ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಅಗತ್ಯ ಕ್ರಮವಹಿಸಲಾಗುತ್ತಿದೆ.

ಕನ್ನಡ ನಾಡು, ನುಡಿ, ಕಲೆ, ಸಾಹಿತ್ಯಕ್ಕೆ ತಮ್ಮ ಜೀವನವನ್ನೇ ಮುಡುಪಾಗಿಟ್ಟು, ಆ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿ, ನಾಡಿಗೆ ಕೀರ್ತಿ ತಂದಂತಹ ಮಹಾನೀಯರ ಹೆಸರಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ 24 ಟ್ರಸ್ಟ್/ಪ್ರತಿಷ್ಠಾನಗಳನ್ನು ಸ್ಥಾಪಿಸುವ ಮೂಲಕ ಅವರ ಕಲಾ ಮತ್ತು ಸಾಹಿತ್ಯಿಕ ಸಾಧನೆಯನ್ನು ಮುಂದಿನ ತಲೆಮಾರಿಗೆ ಪರಿಚಯಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕ್ರಿಯಾಯೋಜನೆಯಲ್ಲಿ ಟ್ರಸ್ಟಗಳ ಕಾರ್ಯಚಟುವಟಿಕೆಗೆ ಅವಕಾಶ ಮಾಡಿಕೊಳ್ಳುವ ಅನುದಾನದ ಮಿತಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. 2022-23ನೇ ಸಾಲಿನಲ್ಲಿ ಪ್ರತಿ ಟ್ರಸ್ಟಿಗೆ ತಲಾ ರೂ.8.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಸಂಖ್ಯೆ: ಕಸಂವಾ 37 ಕವಿಸ 2023

**(ಶಿವರಾಜ.ಎಸ್.ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.